ಹುಡುಗಿಯಾಗಿದ್ದಾಗ ಹೇಗೆ ಕಾಣುತಿದ್ದಾಳೋ ಬಹುತೇಕ ಹಾಗೆಯೇ ಕಾಣುತಿದ್ದಾಳೆ. ತನ್ನ ಕಣ್ಣನ್ನೇ ತಾನು ನಂಬದಾದ. ಪ್ರಾಂಶುಪಾಲರು, 'ಬಾ ನಂದಿನಿ! ಈ ಸರ್ ನಿನಗೆ ಒಂದಿಷ್ಟು ಪ್ರಶ್ನೆಗಳನ್ನ ಕೇಳುತ್ತಾರಂತೆ ಅವುಗಳಿಗೆ ನೀನು ಉತ್ತರಿಸುತ್ತಿಯ?' ಎಂದು ಕೇಳಿದರು. ಅದಕ್ಕೆ ನಂದಿನಿ, 'ಯಾಕೆ ಸರ್? ಪರೀಕ್ಷೆ ಇನ್ನೂ ಹೋದ ವಾರನೇ ಮುಗಿದೋಗಿದೆಯಲ್ಲ. ಮತ್ತೆ ಪ್ರಶ್ನೆನ?' ಎಂದು ಕೇಳಿದಳು. ಅದಕ್ಕೆ ಪ್ರಾಂಶುಪಾಲರು, 'ಹ ಹ ಹ! ಆ ಪರೀಕ್ಷೆಯಲ್ಲ ನಂದಿನಿ. ಇದು ಬೇರೆ ಪರೀಕ್ಷೆ, ಇಲ್ಲಿ ಪಾಸು ಫೇಲು ಇಲ್ಲ' ಎಂದರು. ಅದಕ್ಕೆ ನಂದಿನಿ, 'ಇಲ್ಲ ಸಾರ್ ನಮ್ ಪರೀಕ್ಷೆ ಮುಗಿದುಹೋಗಿದೆ. ಇನ್ನು ನಾನು ಯಾವ್ ಪ್ರಶ್ನೇಗೂ ಉತ್ತರಿಸಲ್ಲ' ಎಂದು ತಾಕೀತು ಮಾಡಿದಳು. ಅದಕ್ಕೆ ಪ್ರಾಂಶುಪಾಲರು ರಾಘವನೆಡೆಗೆ ತಿರುಗಿ, 'ನಾನು ಆಗಲೇ ಹೇಳಲಿಲ್ಲವೇ ಇಲ್ಲಿಯ ಮಕ್ಕಳು ಪರೀಕ್ಷೆ ಅಂದ್ರೆ ಎಷ್ಟು ತ್ರಾಸು ಪಟ್ಕೊಳ್ತಾವೆ ಅಂತ.' ಎನ್ನುತ್ತಾ ಆತನಿಗೆ ಮೊದಲೇ ಸೂಚಿಸಿದಂತೆ ಹೇಳುವಂತೆ ಕಣ್ಣು ಸನ್ನೆ ಮಾಡಿದರು. ಆಗ ರಾಘವ, 'ನಂದಿನಿ, ನೀನು ಪ್ರಶ್ನೆಗಳನ್ನು ಉತ್ತರಿಸಿದರೆ ಐಸ್‌ಕ್ರೀಮ್ ಕೊಡಿಸುತ್ತೇನೆ' ಎಂದ. ಐಸ್‌ಕ್ರೀಮ್ ಎಂದು ಕೇಳುತ್ತಿದ್ದಂತೆಯೇ ಆಕೆಯ ಮುಖ ಅರಳಿತು. 'ವೆನಿಲ್ಲ ಸ್ಕೂಪ್' ಎಂದಳು. ರಾಘವ ನಕ್ಕು ಹಾಗೆಯೇ ಆಗಲಿ ಎಂದ. ಜಾಹ್ನವಿಗೂ ಕೂಡ ವೆನಿಲ್ಲ ಸ್ವಾದದ ಐಸ್‌ಕ್ರೀಮ್ ಅಂದರೆ ಪ್ರಾಣ. ಇಬ್ಬರೂ ಪಕ್ಕದ ಖಾಲಿ ರೂಮಿಗೆ ಹೋದರು.



ಇಡೀ ರಾತ್ರಿ ನಿದ್ದೆಗೆಟ್ಟು ಪ್ರಶ್ನೆಗಳನ್ನು ಸಿದ್ದಪಡಿಸಿ ಜೊತೆಗೆ ತಂದಿದ್ದ. ಕಂಪ್ಯೂಟರ್ ಓಪನ್ ಮಾಡಿ ಒಂದೊಂದೇ ಪ್ರಶ್ನೆಗಳನ್ನು ತೋರಿಸತೊಡಗಿದ. ಪ್ರತೀ ಪ್ರಶ್ನೆಯೂ ನಾಲ್ಕು ಚಿತ್ರಗಳನ್ನು ಹೊಂದಿತ್ತು. ಅದರಲ್ಲಿ ಒಂದು ಮಾತ್ರ ಜಾಹ್ನವಿಗೆ ಸಂಬಂಧಪಟ್ಟಿದ್ದಾಗಿತ್ತು. ಅಪ್ಪ, ಅಮ್ಮ, ಅಣ್ಣ, ಆಕೆಯದ್ದೆ ಹಳೆಯ ಚಿತ್ರ, ತನ್ನ ಹಳೆ ಚಿತ್ರ, ಮನೆ, ಹೀಗೆ ಸಂಬಂಧಗಳನ್ನು ಸೂಚಿಸುವ ಪ್ರಶ್ನೆಗಳನ್ನೆಲ್ಲ ನಂದಿನಿ ಸರಿಯಾಗಿಯೇ ಗುರುತಿಸಿದಳು. ಓದು, ಹವ್ಯಾಸ, ಭೇಟಿಕೊಟ್ಟ ಜಾಗಗಳು ಇವುಗಳಲ್ಲಿ ಅರ್ಧ ಸರಿ ಅರ್ಧ ತಪ್ಪಾಗಿ ಗುರುತಿಸಿದಳು. ಇಷ್ಟದ ಸಿನಿಮಾ, ಇಷ್ಟದ ಬಣ್ಣ ಹೀಗೆ ಇಷ್ಟಗಳಿಗೆ ಸಂಬಂಧಪಟ್ಟ ಪ್ರಶ್ನೆಗಳಲ್ಲಿ ಬಣ್ಣ, ಮತ್ತು ತಿನಿಸನ್ನು ಹೊರತುಪಡಿಸಿ ಇನ್ನೆಂಟು ಪ್ರಶ್ನೆಗಳಿಗೆ ತಪ್ಪಾಗಿ ಗುರುತಿಸಿದಳು. ಒಟ್ಟಾರೆಯಾಗಿ ಶೇಕಡಾ 55 ಪ್ರಶ್ನೆಗಳಿಗೆ ನಂದಿನಿ ಜಾಹ್ನವಿಗೆ ಸಂಬಂಧಪಟ್ಟ ಉತ್ತರಗಳನ್ನೇ ಗುರುತಿಸಿದ್ದಳು. ಇವಳೇ ಅವಳೆಂದು ಖಚಿತವಾಗಿ ಹೇಳಲು ವೈಜ್ಞಾನಿಕ ಪದ್ಧತಿಗಳ ಮೇರೆಗೆ ಆಧಾರ ಸಾಕಾಗಿರಲಿಲ್ಲ. ಪರೀಕ್ಷೆ ಮುಗಿದಾಗ ನಂದಿನಿ, 'ಹೇಗೆ ಮಾಡಿದೆ ನಾನು?' ಎಂದು ತನ್ನ ಮುಗ್ಧ ಕಣ್ಣುಗಳನ್ನು ಇಷ್ಟಗಲ ಮಾಡಿ ಕೇಳಿದಳು. ಅದಕ್ಕೆ ರಾಘವ, 'ಚೆನ್ನಾಗಿ ಮಾಡಿದೆ, ಬಾ ಈಗ ಐಸ್‌ಕ್ರೀಮ್ ತಿನ್ನೋಣ' ಎಂದು ಆಕೆಯನ್ನು ಕರೆದುಕೊಂಡು ಹೋಗಿ ತನ್ನ ಬೈಕ್ ನಿಂತಲ್ಲಿಗೆ ಕರೆದೊಯ್ದ.

ರಾಘವ ಹೋಗಿ ತನ್ನ ಯಮಃ ಬೈಕ್ ಅನ್ನು ಪಟ್ ಪಟ್ ಅನ್ನಿಸುತ್ತಲೇ, ನಂದಿನಿ ಓಡಿ ಬಂದು ರಾಘವನ ಕಾಲನ್ನು ಅಪ್ಪಿ, 'ಬೇಡ!... ಬೇಡ!... ಈ ಬೈಕಿನಲ್ಲಿ ಹೋಗೋದು ಬೇಡ... ನಡೆದೇ ಹೋಗೋಣ' ಎಂದು ದೊಡ್ಡ ಬಾಯಿ ಮಾಡಿ ಅಳತೊಡಗಿದಳು. ರಾಘವನ ಕಣ್ಣು ಹಾಗೆಯೇ ತೇವವಾಯಿತು. ಬೈಕಿನಿಂದ ಇಳಿದವನೇ ಅವಳ ಎತ್ತರಕ್ಕೆ ಮಂಡಿಯೂರಿ ಅವಳನ್ನು ಅಪ್ಪಿ, 'ಸರಿ ನಂದಿನಿ ಅಳಬೇಡ ನಡೆದೇ ಹೋಗೋಣ!' ಎಂದ. ಇಬ್ಬರ ಕಣ್ಣಲ್ಲೂ ನೀರು ಧಾರಾಕಾರವಾಗಿ ಸುರಿಯುತ್ತಿತ್ತು. ಇಬ್ಬರ ಮನವನ್ನೂ ಅದೇನೋ ಒಂದು ಹೇಳಲಾಗದ ನೆಮ್ಮದಿ ನಿಧಾನಕ್ಕೆ ತುಂಬಿತು.

●